ಕೊಪ್ಪಳ ಜಿಲ್ಲೆಯಲ್ಲಿ ಪ್ಯಾಕೇಜ್ ಕೆಲಸದಲ್ಲಿ ಪಾಟ್ ಹೋಲ್ ಮತ್ತು ವೈಡ್‌ನಿಂಗ್ ಮಾಡತಕ್ಕಂಥದ್ದು, ಎರಡಕ್ಕೆ ಮಾತ್ರ ಪ್ರಾವಿಜನ್ ಮಾಡಿಕೊಂಡಿರುತ್ತಾರೆ. ಆದರೆ ಕೆಲವು ಭಾಗದಲ್ಲಿ ರಸ್ತೆಗಳು ಪೂರ್ಣಹಾಳಾಗಿರುತ್ತವೆ. ಅದಕ್ಕೆ ತಾವು ರೀಕಾರ್ಪೆಟ್ ಮಾಡುವ ವ್ಯವಸ್ಥೆಯನ್ನು ಮಾಡಿಕೊಂಡಿರುವುದಿಲ್ಲ. ಇದಕ್ಕೆ ವಿಶೇಷ ಅನುದಾನವನ್ನು ತಾವು ಕೊಡುತ್ತೀರಾ ಎನ್ನುವ ಬಗ್ಗೆ ಹೇಳಬೇಕು.

ಶ್ರೀ ಧರ್ಮಸಿಂಗ್:— ರೀಕಾರ್ಪೆಟಿಂಗ್ ಮಾಡುವ ವ್ಯವಸ್ಥೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಇದಕ್ಕ ಬಹಳ ಹಣ ಬೇಕಾಗುತ್ತದೆ. ಇದನ್ನು ಮಾಡತಕ್ಕಂತಹ ಆಲೋಚನೆ ಇರುತ್ತದೆ.

ಶ್ರೀ ಬಿ.ಆರ್. ಯಾವಗಲ್:— ಮಾನ್ಯ ಅಧ್ಯಕ್ಷರೆ, ಬೆಳಗಾಂ, ಸಿಂಧನೂರು ರಸ್ತೆಯನ್ನು ತಾವು ಮೇಲ್ದರ್ಜೆಗೇರಿಸುವುದು ಹಾಗೂ ಮೆಂಟಿನೆನ್ಸ್ ಕೊಡುತ್ತಿದ್ದೀರಿ, ಆ ಮೆಂಟಿನೆನ್ಸ್ ಮಾಡುವ ಬಗ್ಗೆ ತಾವು ಏನಾದರೂ ಒಂದು ಗೈಡಲೈನ್ಸ್‌ನ್ನು ಮಾಡಿ ಏನು ಕಂಡಿಷನ್ ಹಾಕಿದ್ದೀರಿ? ಈ ರಸ್ತೆಯನ್ನು ಎಷ್ಟು ವರ್ಷದಲ್ಲಿ ಮೇಲ್ದರ್ಜೆಗೇರಿಸುತ್ತೀರಿ?

ಶ್ರೀ ಧರ್ಮಸಿಂಗ್:— ಎಲ್ಲಿ ಸಮರ್ಪಕವಾಗಿ ಕೆಲಸವಾಗುತ್ತಿಲ್ಲವೋ, ಅಲ್ಲಿ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಬಂಡೀಪುರ ಅರಣ್ಯಕ್ಕೆ ಹೊಂದಿಕೊಂಡಂತೆ ಮಂಗಲಗ್ರಾಮಕ್ಕೆ ರೆಸಾರ್ಟ್ ಪ್ರಾರಂಭ ಮಾಡಲು ಅನುಮತಿ.

249(2758) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ):— ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಂಡ್ಲುಪೇಟೆ ತಾಲ್ಲೂಕು ಬಂಡೀಪುರ ಅರಣ್ಯಕ್ಕೆ ಹೊಂದಿಕೊಂಡಂತೆ ಮಂಗಲ ಗ್ರಾಮಕ್ಕೆ ಸೇರಿದ ಜಮೀನಿನಲ್ಲಿ ರೆಸಾರ್ಟ್ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಿದೆಯೇ?

ಆ) ಬಂದಿದ್ದರೆ ಅದರ ಬಗ್ಗೆ ವಿವರ ಒದಗಿಸುವುದು.

ಇ) ಕಂದಾಯ ಇಲಾಖೆ, ಅರಣ್ಯ ಇಲಾಖೆ, ಪರಿಸರ ಇಲಾಖೆ ಮತ್ತು ಗ್ರಾಮ ಪಂಚಾಯಿತಿಗಳಿಂದ ಅನುಮತಿ ಪಡೆಯಲಾಗಿದೆಯೆ?

ಈ) ಉದ್ದೇಶಿತ ರೆಸಾರ್ಟ್ ಮಾಲೀಕರು ಜಮೀನಿನ ಒಡೆತನ ಹೊಂದಿದ್ದಾರೆಯೇ?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :—

ಅ) ಹೌದು

ಆ) ಮೆ: ಬಂಡೀಪುರ ಬರ್ಡ್‌ಪಾರ್ಕ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಗುಂಡ್ಲುಪೇಟೆ ತಾಲ್ಲೂಕು ಮಂಗಳ ಗ್ರಾಮದಲ್ಲಿ ಬರ್ಡ್‌ಪಾರ್ಕ್ ರೆಸಾರ್ಟ್ ಸ್ಥಾಪಿಸುವ ಪ್ರಸ್ತಾವನೆಯನ್ನು ಇಲಾಖೆಯು ಏಕ ಗವಾಕ್ಷಿ ಸಮಿತಿಗೆ ಸಲ್ಲಿಸಿದೆ. ಈ ಸಂಸ್ಥೆಯು ಯೋಜನೆಯ ಎಲ್ಲಾ ವಿವರಗಳನ್ನು ದಾಖಲೆಗಳೊಂದಿಗೆ ನೀಡದೆ ಇರುವುದರಿಂದ ಏಕ ಗವಾಕ್ಷಿ ಸಮಿತಿ ಎಲ್ಲಾ ದಾಖಲೆಗಳನ್ನು ಒದಗಿಸುವಂತೆ ಕೋರಿದೆ.

ಇ) ಗೊತ್ತಿಲ್ಲ.

ಈ) ಗೊತ್ತಿಲ್ಲ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :— ಮಾನ್ಯ ಅಧ್ಯಕ್ಷರೆ, ನಾನು ಮೊದಲನೆಯದಾಗಿ ಕೇಳಿರುವ ಪ್ರಶ್ನೆಗೆ ಹೌದು ಎಂದು ಉತ್ತರಿಸಿರುತ್ತಾರೆ. ಅದರ ಬಗ್ಗೆ ವಿವರವನ್ನು ಒದಗಿಸಬೇಕೆಂದು ಕೇಳಿದಾಗ, ಮೆ: ಬಂಡೀಪುರ ಬರ್ಡ್‌ಪಾರ್ಕ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಸಿಂಗಲ್ ವಿಂಡೋ ಏಜೆನ್ಸಿಯ ಮುಂದೆ ಅರ್ಜಿಯನ್ನು ಸಲ್ಲಿಸಿದ್ದಾರೆಂದು ಹೇಳಿದ್ದಾರೆ. ಆದರೆ ಯಾವ ವರ್ಷದಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆಂದು ಹೇಳಲಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಅರ್ಜಿಯನ್ನು ಸಲ್ಲಿಸಬೇಕಾದರೆ ಪ್ರಾರಂಭಿಕವಾಗಿ ಕಂದಾಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಪರಿಸರ ಇಲಾಖೆ ಹಾಗೂ ಗ್ರಾಮ ಪಂಚಾಯಿತಿಯಿಂದ ಅನುಮತಿಯನ್ನು ಪಡೆದಿದ್ದಾರೆಯೇ ಎಂದು ಕೇಳಿದ್ದೇನೆ. ಅದಕ್ಕೆ ಗೊತ್ತಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿಂದ ಅನುಮತಿಯನ್ನು ಪಡೆದುಕೊಳ್ಳದೆ ನೇರವಾಗಿ ಸಿಂಗಲ್ ವಿಂಡೋ ಏಜೆನ್ಸಿಗೆ ಅರ್ಜಿಯನ್ನು ಸಲ್ಲಿಸುವುದಕ್ಕೆ ಅವಕಾಶವಿದೆಯೇ? ಉದ್ದೇಶಿತ ರೆಸಾರ್ಟ್ ಮಾಲೀಕರು ಜಮೀನಿನ ಒಡೆತನ ಹೊಂದಿದ್ದಾರೆಯೇ ಎಂದು ಕೇಳಿದ್ದೇನೆ, ಅದಕ್ಕೂ ಸಹ ಗೊತ್ತಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಬೇಸಿಕ್ ಆಗಿ ಜಮೀನಿನ ಒಡೆತನವನ್ನು ಹೊಂದಿಲ್ಲದೆಯೇ ಅಲ್ಲಿ ರೆಸಾರ್ಟ್‌ನ್ನು ಪ್ರಾರಂಭ ಮಾಡುವುದಕ್ಕೆ ಯಾವ ರೀತಿಯಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ? ಇದರ ಹಿಂದೆ ಯಾರ ಒಂದು ಪ್ರಭಾವವಿದೆ? ಈ ಒಂದು ಜಮೀನಿನಲ್ಲಿ ಬರ್ಡ್‌ಪಾರ್ಕ್ ಮಾಡಬೇಕೆಂದು ಪ್ರಯತ್ನವನ್ನು ಮಾಡುತ್ತಿದ್ದಾರೆ, ಆ ಜಮೀನುಗಳು 1975-76ರಲ್ಲಿ ದರ್ಖಾಸ್ತು, ಮೂಲಕ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಮಂಜೂರು ಮಾಡಲಾಗಿದೆ.

ಶ್ರೀ ಆರ್. ರೋಷನ್ ಬೇಗ್ :— ಮಾನ್ಯ ಅಧ್ಯಕ್ಷರೆ, ಮೆ: ಬಂಡೀಪುರ ಬರ್ಡ್‌ಪಾರ್ಕ್ ಪ್ರೈವೇಟ್ ಲಿಮಿಟೆಡ್ ನವರು ಸರ್ಕಾರಕ್ಕೆ 30ನೇ ಜನವರಿಯಂದು

ಅರ್ಜಿಯನ್ನು ಸಲ್ಲಿಸಿದ್ದಾರೆ. ಅವರು ನಮಗೆ ಅನುಮತಿಯನ್ನು ಕೇಳಿದ್ದರು, ಅವರಿಗೆ ನಾವು ಇನ್ನೂ ಅನುಮತಿಯನ್ನು ನೀಡಿರುವುದಿಲ್ಲ. ಸಿಂಗಲ್ ವಿಂಡೋ ಏಜೆನ್ಸಿ ಬಂದಾಗ ಅವರಿಗೆ ನಾವು ಹೇಳಿದ್ದೇವೆ, ಖಾತಾ, ಆರ್‌ಟಿಸಿ ಎಕ್ಸ್‌ಟ್ರಾಕ್ಟ್ ಇದಕ್ಕೆ ಬೇಕಾದ ಎಲ್ಲಾ ವಿವರಗಳನ್ನು ತೆಗೆದುಕೊಂಡು ಬನ್ನಿ, ಬಂಡೀಪುರ ಅರಣ್ಯದಲ್ಲಿ ಬರುವುದರಿಂದ ಅರಣ್ಯ ಇಲಾಖೆ ಮತ್ತು ಪರಿಸರ ಇಲಾಖೆಯಿಂದ ಅನುಮತಿಯನ್ನು ಪಡೆದುಕೊಂಡು ಬಂದ ನಂತರ ನಾವು ಕನ್ಸಿಡರ್ ಮಾಡುತ್ತೇವೆಂದು ಹೇಳಿರುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ನಾಟ್ ನೋನ್ ಎಂದು ಹೇಳುತ್ತಿದ್ದಾರೆ, ಈ ರೀತಿ ಬೇಜವಾಬ್ದಾರಿಯಿಂದ ಉತ್ತರವನ್ನು ಕೊಟ್ಟರೆ ಹೇಗೆ?

ಶ್ರೀ ಆರ್. ರೋಷನ್ ಬೇಗ್ :— ನೀವು ಉತ್ತರವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಿ, ಒಂದೇ ಸಲಕ್ಕೆ ನೀವು ಉತ್ತರವನ್ನು ಅರ್ಥಮಾಡಿಕೊಳ್ಳದೆ ಬೇಜವಾಬ್ದಾರಿ ಎನ್ನುವ ಮಾತನ್ನು ಆಡಿದರೆ ಹೇಗೆ? ನಾನು ಉತ್ತರವನ್ನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು :— ಮಾನ್ಯ ಮಂತ್ರಿಗಳು ಉತ್ತರವನ್ನು ಹೀಗೇ ಕೊಡಬೇಕೆಂದು ಒತ್ತಾಯ ಮಾಡಲಾಗುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ :— ಅವರು ಅರ್ಜಿಯಲ್ಲಿ ಖಾಸಗಿ ಜಮೀನೇ ಅಥವಾ ಸರ್ಕಾರಿ ಜಮೀನೇ ಎಂಬುದನ್ನು ತೋರಿಸಿದ್ದಾರಾ? ಇವರು ಯಾವ ಜಮೀನನ್ನು ತೋರಿಸುತ್ತಾರೆ? ಆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆಯೇ?

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಮುಖವಾದ ವಿಚಾರವೇನೆಂದರೆ, ಯಾರಾದರೂ ರೆಸಾರ್ಟ್ ಮಾಡಬೇಕಾದವರು ಮೊದಲು ಆ ಜಮೀನಿನ ಒಡೆಯರಾಗಿರಬೇಕು. ಮಾನ್ಯ ಸದಸ್ಯರು ಕೇಳಿದ ಹಾಗೆ, ಆ ಜಮೀನು ಪರಿಶಿಷ್ಟಜಾತಿಗೆ ಸೇರಿದ್ದಾಗಿದೆಯೇ? 1975-76ರಲ್ಲಿ ಸುಮಾರು 64 ಎಕರೆ ಜಮೀನು ಅವರಿಗೆ ದರ್ಖಾಸ್ತಿನ ಮೂಲಕ ಮಂಜೂರಾತಿಯಾಗಿತ್ತು. ಅದನ್ನು ಬೇರೆಯವರಿಗೆ ವರ್ಗಾವಣೆ ಮಾಡಿದರೆ ಪಿಟಿಸಿಎಲ್ ಆಕ್ಟ್ ಅಡ್ಡಿ ಬರುತ್ತದೆ. ಜಮೀನು ವರ್ಗಾವಣೆ ಮಾಡಿದರೆ ಅದು ಕಾನೂನು ಬಾಹಿರವಾಗುತ್ತದೆ. ಅದರ ಬಗ್ಗೆ ಕೂಡ ಹೇಳಬೇಕು, ಇದು ಆಕ್ಟ್ ಪ್ರಕಾರ ಬರುತ್ತದೆಯೋ ಇಲ್ಲವೋ ಹಾಗೂ ಜಮೀನಿನ ಒಡೆಯನಾಗಿರುತ್ತಾನೆಯೋ ಇಲ್ಲವೋ ಎಂಬುದನ್ನು ನೋಡಬೇಕು. ಆತನು ಜಮೀನಿನ ಒಡೆಯನಾಗಿರದಿದ್ದರೆ ಸಿಂಗಲ್ ವಿಂಡೋ ಏಜೆನ್ಸಿಗೆ ಪ್ರಪೋಸಲ್ ಇಡಲು ಹೇಗೆ ಸಾಧ್ಯ?

ಇದರ ಬಗ್ಗೆ ಆಡ್ಮಿಶನ್ ಸ್ಟೇಜ್‌ನಲ್ಲಿಯೇ ಇತ್ಯರ್ಥಮಾಡಿಕೊಂಡು ರಿಜಿಸ್ಟ್ರೇ ಮಾಡಬೇಕಾಗುತ್ತದೆ. ಆದರೆ ನೀವು ಎಂಟರ್‌ಟೈನ್ ಮಾಡಿರುವುದು ಹೇಗಿದೆಯೋ ನನಗೆ ಗೊತ್ತಿಲ್ಲ. ಒಂದು ವೇಳೆ ಪರಿಶಿಷ್ಟ ಜಾತಿಯವರಿಗೆ ಆಸೆ ಆಕಾಂಕ್ಷೆಗಳನ್ನು ಒಡ್ಡಿ ಅವರಿಗೆ 2 ರಿಂದ 5 ಸಾವಿರ ರೂಪಾಯಿಗಳನ್ನು ಕೊಟ್ಟು ಜಮೀನನ್ನು ಕೊಂಡುಕೊಂಡಿದ್ದೇ ಆದರೆ ಅದು ಅನ್ಯಾಯವಾಗುತ್ತದೆಯಲ್ಲದೆ ಕಾನೂನುಬಾಹಿರವೂ ಆಗುತ್ತದೆ. ಆದುದರಿಂದ ಇದರ ಬಗ್ಗೆ ಗಮನಹರಿಸಬೇಕು. ಇದರ ಬಗ್ಗೆ ತಾವು ಸ್ಪಷ್ಟೀಕರಣ ನೀಡಬೇಕು. ನಿಜವಾಗಿಯೂ ಅದು ಪರಿಶಿಷ್ಟಜಾತಿ ಪರಿಶಿಷ್ಟಪಂಗಡದವರ ಜಮೀನು ಆಗಿದ್ದರೆ ಅದನ್ನು ಕೊಂಡುಕೊಳ್ಳುವುದಕ್ಕೆ ಬರುವುದಿಲ್ಲ. ಅದಕ್ಕೆ ಸ್ಪಷ್ಟೀಕರಣ ನೀಡಬೇಕೆಂದು ಕೇಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ :— ಮಾನ್ಯ ಸದಸ್ಯರು ಕೊಟ್ಟಿರತಕ್ಕ ಸಲಹೆ ಒಳ್ಳೆಯದು. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದ ವತಿಯಿಂದ ಏನು ಮಾಡುತ್ತೇವೆಂದರೆ, ಪ್ರೈವೇಟ್ ಇನ್‌ವೆಸ್ಟರ್ಸ್ ಯಾರಾದರೂ ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಮಾಡುತ್ತೇವೆಂದು ಮುಂದೆ ಬಂದರೆ ಅವರಿಗೆ ನಾವು ಎನ್‌ಕರೇಜ್ ಮಾಡುತ್ತೇವೆ. ಸಿಂಗಲ್ ವಿಂಡೋ ಏಜೆನ್ಸಿಗಳ ಮುಂದೆ ಬಂದಾಗ ನೋಡಿ ನೀವು ಇಂಥಿಂಥ ಪರ್ಮಿಷನ್ಸ್ ತೆಗೆದುಕೊಂಡು ಬಂದರೆ ಮಾಡುತ್ತೇವೆಂದು ಹೇಳಿದ್ದೇವೆ. ಜಮೀನಿಗೆ ಸಂಬಂಧಪಟ್ಟಹಾಗೆ ಖಾತೆ, ಆರ್‌ಟಿಸಿ, ಸರ್ವೆ ನಂಬರ್ಸ್ ಎಲ್ಲಾ ತೆಗೆದುಕೊಂಡು ಬನ್ನಿ. ಆಮೇಲೆ ಅಲ್ಲಿ ರೆಸ್ಟಾಟ್ಸ್ ಮಾಡಬೇಕಾದರೆ ಪರಿಸರ ಇಲಾಖೆ, ಅರಣ್ಯ ಇಲಾಖೆಯಿಂದ ಪರ್ಮಿಷನ್ ತೆಗೆದುಕೊಂಡು ಬಂದರೆ ನಾವು ಪರ್ಮಿಷನ್ ಕೊಡುತ್ತೇವೆಂದು ಹೇಳಿದ್ದೇವೆ. ಮಾನ್ಯ ಸೋಮಶೇಖರ್‌ರವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಪರ್ಮಿಷನ್ ಕೊಡಬೇಕಾದರೆ ಅದೆಲ್ಲವನ್ನೂ ನೋಡಿ ಕೊಡುತ್ತೇವೆ.

ಅಧ್ಯಕ್ಷರು :— ಮುಂದಿನ ಪ್ರಶ್ನೆ ಮಾನ್ಯ ಚೌಡರೆಡ್ಡಿಯವರು ಗೈರುಹಾಜರಿದ್ದಾರೆ. ಮುಂದಿನ ಪ್ರಶ್ನೆ ಗೋಪಾಲ ಭಂಡಾರಿ.

ತಾಲ್ಲೂಕ ಕೇಂದ್ರಗಳಲ್ಲಿ ಯುವಜನ ಸೇವಾ ಅಧಿಕಾರಿ ಹುದ್ದೆಗಳ ಭರ್ತಿ

251(2699) ಶ್ರೀ ಗೋಪಾಲ್ ಭಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕೇಂದ್ರಗಳಲ್ಲಿ ಯುವಜನ ಸೇವಾ ಅಧಿಕಾರಿಗಳನ್ನು ಭರ್ತಿ ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?